# ಕೈಲಾಸನಾಥನ ಪದತಲದಲ್ಲಿ

ಸ್ವಾಮಿ ಅಪೂರ್ವಾನಂದ

ರಾಮಕೃಷ್ಣ ಮಹಾಸಂಘದ ಹಿರಿಯ ಸಂನ್ಯಾಸಿಗಳೊಬ್ಬರು ಕೈಲಾಸಪರ್ವತದ ತಪ್ಪಲನ್ನು ತಲುಪಿದ ರೋಮಾಂಚಕಾರಿ ಅನುಭವಕಥನವಿದು. **ಅನುವಾದ:** ಶಾಂತಲಾ ರಾಮಚಂದ್ರ ಹೆಗಡೆ



**ಕೈ**ಲಾಸ ಎನ್ನುವ ಹೆಸರು ಪ್ರಾಯಶಃ 'ಕೆಲಾಸ' ಶಬ್ದದಿಂದ ಬಂದಿದೆ. ಹಿಮಾಲಯದ ಪರ್ವತವಾಸಿಗಳು 'ಕೆಲಾಸ' ಎಂದೇ ಹೇಳುತ್ತಾರೆ. ಈ ಪರ್ವತ ಸ್ಫಟಿಕದಂತೆ ಸ್ವಚ್ಛ ಮತ್ತು ಶುಭ್ರ. ಅದಕ್ಕಾಗಿಯೇ ಇದನ್ನು ಕೈಲಾಸ ಎಂದಿರಬೇಕು. ಕೈಲಾಸ ಪರ್ವತದ ಇನ್ನೂ ಹತ್ತಿರಕ್ಕೆ ಹೋಗುವುದು ಹೇಗೆ? ಎಂದು ನನ್ನ ಮನಸ್ಸು ಒಂದೇ ಸಮನೆ ಚಿಂತಿಸುತ್ತಿತ್ತು. ಊಟವಾದ ಮೇಲೆ ಎಲ್ಲರೂ ಡೇರೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಈ ವೇಳೆಯಲ್ಲಿ ಮೆಲ್ಲನೆ ಡೇರೆಯ ಹೊರಗೆ ಬಂದು ಕೈಲಾಸ ಶಿಖರದ ಕಡೆ ತದೇಕಚಿತ್ತನಾಗಿ ನೋಡತೊಡಗಿದೆ. ಅವರ್ಣನೀಯ ಆನಂದದಿಂದ ದೇಹವು ಪುಲಕಿತವಾಯಿತು. ಇನ್ನೂ ಮುಂದೆ ಹೋಗುವ ಅದಮ್ಯ ಆಕರ್ಷಣೆಯೊಂದು ಅಂತರಂಗದೊಳಗೆ ಸ್ಫುರಿಸಿತು. ಇನ್ನು ತಡೆದುಕೊಳ್ಳಲಾಗಲಿಲ್ಲ. ಗೈಡ್‌ಗೆ ನನ್ನ ಇಂಗಿತವನ್ನು ಸೂಚಿಸಿ ಆಸೆಗಣ್ಣಿನಿಂದ ಮುಂದೆ ನಡೆದೆ. ಸ್ವಲ್ಪ ಹೆಚ್ಚಾಗಿಯೇ ಕಡಿದಾದ ಏರು. ಸುಮಾರು ಅರ್ಧ ಮೈಲಾದ ಮೇಲೆ ಒಂದು ಪರ್ವತ ಶಿಖರವನ್ನೇರಿ ನಿಂತುಕೊಂಡೆ. ಆಹಾ, ಏನು ಅನುಪಮ ಸೊಬಗು! ತಪ್ಪಲಿನ ಪ್ರದೇಶದಿಂದ ಮೊದಲುಗೊಂಡು, ಶಿಖರದವರೆಗೂ ಇಡೀ ಕೈಲಾಸವು ಬಹಳ ಚೆನ್ನಾಗಿ ಕಾಣುತ್ತಿದೆ. ಎದುರಿಗೆ ಯಾವ ತಡೆಯೂ ಇಲ್ಲ! ಅದೂ ಇಷ್ಟು ಹತ್ತಿರದಲ್ಲಿ! ನೋಡುತ್ತಾ ನೋಡುತ್ತಾ ನನ್ನ ಆಸೆ ಇನ್ನೂ ಹೆಚ್ಚಾಯಿತು. ಕೈಲಾಸೇಶ್ವರನ ಪದತಲದಲ್ಲಿ ಹೊರಳಾಡುವ ಇಚ್ಛೆಯು ಹೃದಯದೊಳಗಿನಿಂದ ಮೂಡಿಬರುತ್ತಿತ್ತು. ಪರ್ವತ ಶಿಖರದಿಂದ ಕೆಳಗಿಳಿದು ಮುಂದೆ ಹೋಗತೊಡಗಿದೆ. ದಾರಿಯುದ್ದಕ್ಕೂ ಕಲ್ಲುಗಳು. ಅಪಾಯದಿಂದ ಕೂಡಿದ ಸ್ಥಳ. ಎಡವುತ್ತಾ ಮುಂದಡಿ ಇಡುತ್ತಿದ್ದೆ. ಯಾವುದೋ ಒಂದು ಬಗೆಯ ಆವೇಗದಿಂದ ಮೈಯಲ್ಲೆಲ್ಲಾ ಬೆವರೊಡೆಯುತ್ತಿತ್ತು. ಸ್ವಲ್ಪಸ್ವಲ್ಪವೇ ನಡೆಯುತ್ತ ಒಂದು ಹಿಮನದಿಯ ತೀರಕ್ಕೆ ಇಳಿದು ಬಂದೆ. ನಾಲ್ಕೂ ದಿಕ್ಕಿನಲ್ಲಿ ಸ್ತೂಪಾಕಾರದಲ್ಲಿ ಹಿಮರಾಶಿ ಬಿದ್ದಿತ್ತು. ನಡುವೆ ಹಿಮದಿಂದ ಆವೃತವಾದ ನದೀಪಾತ್ರವಿತ್ತು. ನದಿಯ ಮೇಲಿರುವ ಮಂಜುಗಡ್ಡೆ ಅಲ್ಲಲ್ಲಿ ಒಡೆದು ಶಬ್ದ ಮಾಡುತ್ತ ಚಿಲುಮೆಯ ಹಾಗೆ ನೀರು ಮೇಲೇಳುತ್ತಿತ್ತು. ನಾನು ನದಿ ತೀರದಲ್ಲಿ ಮಂಜುಗಡ್ಡೆಯ ಮೇಲೆ ಮುಂದೆ ಮುಂದೆ ಹೋಗುತ್ತಿದ್ದೆ. ಈ ನದಿಯನ್ನು ನಾನು ಹೇಗಾದರೂ ದಾಟಬೇಕು. ಆದರೆ ದಾಟಲು ಅನುಕೂಲವಾದ ಸ್ಥಳ ಎಲ್ಲೂ ಸಿಗಲಿಲ್ಲ. ನೀರ್ಗಲ್ಲ ಕೆಳಗೆ ಕುಲುಕುಲು ಶಬ್ದ ಮಾಡುತ್ತಾ ನೀರು ಹರಿದುಹೋಗುತ್ತಿತ್ತು. ಅದರ ಶಬ್ದ ಕೇಳಿ ಕೆಳಗೆ ನೀರಿದೆ ಎಂದು ಗೊತ್ತಾಯಿತು. ಮಂಜುಗಡ್ಡೆ ತುಂಬಾ ಆಳವಾಗೇನೂ ಇಲ್ಲ ಎಂದು ಅನ್ನಿಸಿತು. ಈ ನೀರ್ಗಲ್ಲ ಪದರದ ಮೇಲೆ ನಡೆದು ನದಿಯನ್ನು ದಾಟಲು ಹೋದರೆ, ಅದು ಕುಸಿದು, ನದಿಯಲ್ಲಿ ಮುಳುಗಿಹೋಗುವ ಸಂಭವವೇ ಹೆಚ್ಚು! ದಾಟುವುದಕ್ಕೆ ಅನುಕೂಲವಾದ ಜಾಗವನ್ನು ಹುಡುಕುತ್ತಾ, ಮುಂದೆಮುಂದೆ ನಡೆಯುತ್ತಿದ್ದೆ. ಕೈಯಲ್ಲಿದ್ದ ಕೋಲಿನಿಂದ ಮತ್ತು ಕಲ್ಲಿನಿಂದ ಒಂದು ಕಡೆ ಪರೀಕ್ಷೆ ಮಾಡಿ ನೋಡೋಣ ಎಂದೆನಿಸಿತು. "ನೀರ್ಗಲ್ಲ ಪದರ ದಪ್ಪನಾಗಿದೆ, ಇದರ ಮೇಲೆ ನಡೆದು ಹೋಗಬಹುದು"ಎಂದುಕೊಂಡು, ಪರೀಕ್ಷೆ ಮಾಡಿದ ಸ್ಥಳದಲ್ಲಿ, ಬಹಳ ವೇಗವಾಗಿ ಹೇಗೋ ದಾಟಿಬಿಟ್ಟೆ.. ಗೈಡ್ ಕೂಡ ನನ್ನ ಹಿಂದೆಯೇ ಬಂದ.

ಎಲ್ಲೂ ದಾರಿಯ ಗುರುತು ಇಲ್ಲ. ದಾರಿಯನ್ನು ಹುಡುಕುವುದರಿಂದ ಪ್ರಯೋಜನವೂ ಇಲ್ಲ. ಕೈಲಾಸದ ಪಾದಮೂಲವನ್ನು ಗುರಿಯಾಗಿ ಇಟ್ಟುಕೊಂಡು ನೇರವಾಗಿ

ಪರ್ವತದ ಎದುರಾಗಿ ನಡೆದುಹೋಗುತ್ತಿದ್ದೆ. ಈಗ ಒಂದು ಪರ್ವತಕಣಿವೆಯ ಮಧ್ಯದಲ್ಲಿ ಹೇಗೋ ದಾರಿ ಮಾಡಿಕೊಂಡು, ಏದುಸಿರುಬಿಡುತ್ತಾ, ಕಲ್ಲುಗಳನ್ನು ಹಿಡಿದುಕೊಳ್ಳುತ್ತಾ ಮೇಲೆ ಮೇಲೆ ಸಾಗತೊಡಗಿದೆ. ಇಲ್ಲಿ ಮಂಜುಗಡ್ಡೆ ಸ್ವಲ್ಪ ಮಾತ್ರ ಕರಗಿತ್ತು. ಕಲ್ಲುಬಂಡೆಗಳು ಯಾವ ಕ್ಷಣದಲ್ಲಾದರೂ ಉರುಳಿಬೀಳಲು ಸಿದ್ಧವಾಗಿದ್ದವು. ಬಹಳ ಅಪಾಯದ ಸ್ಥಾನ. ವಿಪತ್ತುಗಳಿಂದ ಕೂಡಿದ ಸಂದರ್ಭ. ಏನಾದರೊಂದು ಕಾರಣದಿಂದ ಒಂದೇ ಒಂದು ಕಲ್ಲು ಉರುಳಿದರೂ ಸರ್ವನಾಶ. ಇಂಥ ಸನ್ನಿವೇಶದಲ್ಲಿ ಭಗವಂತನ ಪಾದಪದ್ಮಗಳಲ್ಲಿ ಆತ್ಮನಿವೇದನೆ ಮಾಡಿಕೊಳ್ಳುವುದು ಬಿಟ್ಟರೆ ಬೇರೆ ದಾರಿಯೇ ಇಲ್ಲ.

ನೋಡನೋಡುತ್ತಿದ್ದಂತೆಯೇ ಕೀಚ್‌ಖಾಂಪಾ (ಗೈಡ್‌ನ ಹೆಸರು) ಕಾಲು ಜಾರಿ ಬಿದ್ದ, ಉರುಳುತ್ತಾ ಉರುಳುತ್ತಾ ಹತ್ತು ಹನ್ನೆರಡು ಅಡಿ ಕೆಳಗೆ ಹೋಗಿಬಿಟ್ಟ. ದೈವಕೃಪೆಯಿಂದ ವಿಶೇಷವಾದ ಗಾಯವೇನೂ ಆಗಲಿಲ್ಲ. ಮತ್ತೆ ಉಸಿರನ್ನು ದೀರ್ಘವಾಗಿ ಬಿಡುತ್ತಾ ಮೇಲೆ ಹತ್ತಿ ನನ್ನ ಹತ್ತಿರ ಬಂದ. ಎದುರಿಗೆ, ಆ ಕಡೆ ಈ ಕಡೆ, ಎಲ್ಲಾ ಕಡೆ ಹಿಮವೇ ತುಂಬಿಬಿಟ್ಟಿದೆ. ಇದು ಪೂರ್ಣವಾಗಿ ಹಿಮರಾಜ್ಯ. ನಾನು ಹಿಮದ ಮೇಲೆ ಬಹಳ ಎಚ್ಚರದಿಂದ ನಡೆಯುತ್ತಿದ್ದೆ. ಕಾಲು ಸ್ವಲ್ಪ ಜಾರಿದರೂ ಬಿದ್ದು ಹೋಗುತ್ತಿದ್ದೆ. ಸೊಂಟದವರೆಗೂ ದೇಹ ಮರಗಟ್ಟಿ, ಲಕ್ವಾ ಹೊಡೆದವರ ಹಾಗೆ ಆಗಿಬಿಟ್ಟಿತ್ತು. ಕಾಲು ಮುಂದೆ ಏಳುತ್ತಲೇ ಇರಲಿಲ್ಲ. ಈಗ ಏನು ಮಾಡುವುದು? ಹಿಂದಕ್ಕೆ ಮರಳಲೇ? ಇಲ್ಲ, ಅದು ಸಾಧ್ಯವಾಗದು. ಹಿಂತಿರುಗುವುದಾದರೂ ಎಲ್ಲಿ! ಸ್ವಲ್ಪ ಸ್ವಲ್ಪವೇ ದೇಹದ ಎಲ್ಲ ಅಂಗಗಳೂ ಮರಗಟ್ಟತೊಡಗಿದವು. ಕೆಲವು ಕಡೆಗಳಲ್ಲಿ ಮೊಳಕಾಲವರೆಗೂ ಹಿಮದಲ್ಲಿ ಹುದುಗಿ ಹೋಗುತ್ತಿದ್ದೆ. ಹಿಮಾಚ್ಛಾದಿತವಾದ, ಅತ್ಯಂತ ಕಡಿದಾದ ಒಂದು ಪರ್ವತ ಶಿಖರದ ಮೇಲೆ ತೆವಳುತ್ತಾ ಮುಂದೆ ಹೋಗುತ್ತಿದ್ದೆ. ನಡೆದು ಹೋಗಲು ಆಗುತ್ತಲೇ ಇರುತ್ತಿರಲಿಲ್ಲ. ಅಷ್ಟು ಕಡಿದು. ಅಪ್ಪಿ ತಪ್ಪಿ ಬಲಕ್ಕೋ ಎಡಕ್ಕೋ ಉರುಳಿದೆನೆಂದರೆ, ನನ್ನ ಗುರುತು ಕೂಡ ಯಾರಿಗೂ ಸಿಗುವುದಿಲ್ಲ. ಸುತ್ತಲೂ ಮಂಜು ಕವಿದಿತ್ತು. ಕಣ್ಣು ಮಂಜಾಗಿ ಹೋಗುವಷ್ಟು ಹಿಮ ದಟ್ಟವಾಗಿತ್ತು. ಆ ವಿರಾಟ್‌ಪುರುಷನ ಚರಣಸ್ಪರ್ಶಮಾಡುವ ಒಂದೇ ಬಯಕೆಯಿಂದ, ಕುರುಡನಂತೆ ತಡವರಿಸುತ್ತ ಮುಂದೆ ಸಾಗುತ್ತಿದ್ದೆ. ಅಂತರಂಗದಲ್ಲಿ ವಿಪುಲವಾದ ಉತ್ಸಾಹ, ಅನಂತವಾದ ಬಯಕೆ. ಆದರೆ ದೇಹಶಕ್ತಿ ನಿಶ್ಶೇಷವಾಗಿ ಹೋಗಿತ್ತು! ಆದರೂ ಶರೀರವನ್ನು ಹೇಗೋ ಎಳೆದುಕೊಂಡು ಮುಂದೆ ಮುಂದೆ ಹೋಗುತ್ತಿದ್ದೆ.

ಪರ್ವತ ಶಿಖರದ ಅಂತಿಮ ಘಟ್ಟಕ್ಕೆ ಏರಿ ನಿಂತಿದ್ದೇನೆ. ನಾನು ಅಲ್ಲಿ ನೋಡಿದ್ದೇನು? ಆಹಾ, ಇದು ಸೌಂದರ್ಯ ಮಾತ್ರವಲ್ಲ, ಲೋಕೋತ್ತರವಾದ ಕಾಂತಿ! ಆ ಅದ್ಭುತ ದೃಶ್ಯ ಕೈಲಾಸದ ಸ್ಮೃತಿಯ ಜೊತೆಜೊತೆಗೇ ನನ್ನ ಮಾನಸಪಟಲದಲ್ಲಿ ಚಿರಕಾಲ ಮುದ್ರೆಗೊಂಡಿದೆ. ಎದುರಿಗೆ ಒಂದು ಮೈಲು ದೂರದವರೆಗೆ ಹಿಮಾಚ್ಛಾದಿತ ಸಮತಲ ಪ್ರದೇಶ. ಎರಡೂ ಪಕ್ಕದಲ್ಲಿ ಹಿಮಪರ್ವತಗಳಿಂದ ಸುರಕ್ಷಿತವಾದ ವಿರಾಟ್ ನಾಟ್ಯ ಮಂದಿರದ ಹಾಗೆ ಕಾಣಿಸುತ್ತಿದೆ. ಮುಂದೆ ಸೀಮಾಂತ್ಯದಲ್ಲಿ ತುಷಾರಮಯ ಪಟಭೂಮಿಕೆಯಲ್ಲಿ ಬೆಳ್ಳಿಯಂತೆ ಬೆಳಗುವ ಕೈಲಾಸ ಶಿಖರವು ವಿರಾಜಮಾನವಾಗಿದೆ. ಪಾದಮೂಲದಿಂದ ಶಿರದವರೆಗೆ ಸದಾಶಿವನ ಇಡೀ ಶರೀರದಂತೆ ಕೈಲಾಸ ಪರ್ವತವು ಗೋಚರವಾಗುತ್ತಿದೆ. ಕೈಲಾಸಪತಿಯ ವಿಭೂತಿಭೂಷಿತ ಪರಿಸರದಲ್ಲಿ ಅಸ್ತಂಗತನಾಗುತ್ತಿರುವ ಸೂರ್ಯನ ಕೆಂಪು ಛಾಯೆಯು, ಒಂದು ಅನುಪಮ ರೂಪಮಾಧುರ್ಯವನ್ನು ಸೃಷ್ಟಿಸಿದೆ. ಈ ಅಪೂರ್ವ ಪ್ರಕೃತಿಸೌಂದರ್ಯವನ್ನು ಕಂಡು ನಾನು ಸ್ತಬ್ಧನಾದೆ. ನನ್ನೆರಡೂ ಕಣ್ಣುಗಳಿಂದ, ಬಾಯಾರಿದವನಂತೆ ಅದನ್ನು ಹೀರಿಕೊಂಡೆ. ಇಡೀ ವಾತಾವರಣ ನೀರವವಾಗಿತ್ತು. ಪರಿಸರವು ಧ್ಯಾನಗಂಭೀರಭಾವದಲ್ಲಿ ಮುಳುಗಿಹೋಗಿತ್ತು. ಆವೇಗ, ಶ್ರದ್ಧೆ, ಆನಂದ, ಉಲ್ಲಾಸಗಳಿಂದ ನನ್ನ ಹೃದಯದ ಬಡಿತವೇ ನಿಂತುಹೋದಂತಾಗಿತ್ತು. ಹಸಿದು ಕಂಗಾಲಾದವನಂತೆ ಕೈಲಾಸನಾಥನನ್ನು ನೋಡುತ್ತಲೇ ಇದ್ದೆ! ಎಷ್ಟು ನೋಡಿದರೂ ತಣಿಯದ ನೋಟವಿದು! ಯುಗಯುಗಾಂತರಗಳ ತನಕ ಅನಂತಕಾಲದವರೆಗೂ ಒಂದೇ ಸಮನೆ ನೋಡಿದರೂ ಮುಗಿಯದ ದೃಶ್ಯವದು. ಆಗ ನನಗೆ ಮತ್ತೇನೂ ಬೇಡವಾಗಿತ್ತು; ಪಡೆಯಬೇಕಾದುದೇನೂ ಇಲ್ಲವೆನಿಸಿತ್ತು. ಈ ಸ್ಥಳ ಜಗತ್ತಿನ ಕೋಲಾಹಲ ದ್ವಂದ್ವಗಳಿಂದ ಎಷ್ಟು ದೂರ! ಎಷ್ಟು ಉನ್ನತ!

ಮತ್ತೂ ಹತ್ತಿರ ಹೋಗುವ ಅದಮ್ಯ ಆಕರ್ಷಣೆಯಲ್ಲಿ ಹಿಮದ ಮೇಲೆಯೇ ಮುಂದೆ ಮುಂದೆ ನಡೆದು ಹೋಗುತ್ತಿದ್ದೆ. ದೇಹದಲ್ಲಿ ನವಚೈತನ್ಯ ಉಕ್ಕಿ ಬರುತ್ತಲಿತ್ತು. ಅಂತರಂಗದಲ್ಲಿ ವಿಪುಲ ಆನಂದ ಮನೆಮಾಡಿತ್ತು. ಮೊಳಕಾಲು ಮುಳುಗುವವರೆಗೆ ಮಂಜಿನಲ್ಲಿ ಹುಗಿದು ಹೋಗುತ್ತಿದ್ದೆ, ಆದರೂ ಏನೂ ಕಷ್ಟವೆನಿಸಲಿಲ್ಲ. ವಿಪರೀತ ಛಳಿ, ಉಸಿರಿನ ಸಂಕಟ – ಇದೊಂದೂ ಅನುಭವವಾಗುತ್ತಿರಲಿಲ್ಲ. ಶರೀರ ಹಗುರವಾಗಿತ್ತು. ಶೂನ್ಯದಲ್ಲಿ ತೇಲಿದಂತೆ ಚಲಿಸುತ್ತಿದ್ದೆ.

ಒಂದು ಮಂಜಿನ ಹಳ್ಳದೊಳಗೆ ನನ್ನ ಗೈಡ್ ಕೀಚ್‌ಖಾಂಪಾ ಸೊಂಟದವರೆಗೆ ಹುಗಿದುಹೋದ. ಏನು ಮಾಡಿದರೂ ಮೇಲೇಳಲು ಆಗುತ್ತಿರಲಿಲ್ಲ. ಎಷ್ಟೆಷ್ಟು ಪ್ರಯತ್ನ ಮಾಡುತ್ತಿದ್ದನೋ ಅಷ್ಟಷ್ಟೂ ಇನ್ನೂ ಹುಗಿದುಹೋಗುತ್ತಿದ್ದ. ಈಗೇನು ಮಾಡುವುದು? ಕೈಹಿಡಿದು ಬಹಳ ಕಷ್ಟದಿಂದ ಅವನನ್ನು ಎಳೆದು ಮೇಲೆತ್ತಿದ್ದಾಯಿತು. ಇದ್ದಕ್ಕಿದ್ದಂತೆಯೇ ಇಡೀ ಪರ್ವತ ಪ್ರದೇಶ ಕಂಪಿಸುತ್ತಾ ಒಂದು ದೊಡ್ಡ ಕರ್ಕಶ ಶಬ್ದವಾಯಿತು. ಅದಾದ ಎರಡು ನಿಮಿಷದಲ್ಲಿ ಗುಡುಗಿನಂತಹ ಮತ್ತೊಂದು ಭೀಕರ ಶಬ್ದ! ಪರ್ವತದ ತುದಿಯೇ ಕಳಚಿಬಿದ್ದಂತೆ, ನಮ್ಮ ಹತ್ತಿರದಲ್ಲಿಯೇ, ಮೇಲಿನಿಂದ ಯಾವುದೋ ದೊಡ್ಡ ವಸ್ತು ಜೋರಾಗಿ ಬಿತ್ತು. ಇಬ್ಬರೂ ಭೀತಿಯಿಂದ ನಿಶ್ಚೇಷ್ಟಿತರಾಗಿ, ನಿಶ್ಚಲರಾಗಿ ನಿಂತಿದ್ದೆವು. ಪರ್ವತದ ಮೂಲೆಮೂಲೆಗಳಲ್ಲಿ ಇದರಿಂದ ತೀವ್ರ ಪ್ರತಿಧ್ವನಿಯಾಯಿತು. ಭೂತ ಪ್ರೇತಗಳ ವಿಕಟ ಕೋಲಾಹಲದಂತೆ ಪ್ರತಿಧ್ವನಿ ಕೇಳಿಸುತ್ತಿತ್ತು.

ಗೈಡ್ ಮೆಲ್ಲಗೆ, ಮೃದುವಾಗಿ ಹೇಳಿದ, "ಸ್ವಾಮೀಜಿ, ಇನ್ನೂ ಮುಂದೆ ಹೋಗಬೇಡಿ. ಹಿಂದಿರುಗೋಣ, ಕೈಲಾಸ ದರ್ಶನವಂತೂ ಬಹಳ ಚೆನ್ನಾಗಿ ಆಗಿದೆ. ಇನ್ನೂ ಮುಂದೆ ಹೋಗುವುದು ಬೇಡ. ಶಿವನ ಅನುಚರರೂ, ಭೂತಪ್ರೇತಗಳೂ ಹಿಮಗಡ್ಡೆಗಳನ್ನು ಬೀಳಿಸಿ ತೊಂದರೆ ಕೊಡುತ್ತಿದ್ದಾರೆ. ಅವರು ಇನ್ನೂ ಮುಂದೆ ಹೋಗಲು ನಮ್ಮನ್ನು ಬಿಡಲಾರರು. ಯಾವ ಮಾನವರಿಗೂ ಅವರು ಮುಂದೆ ಹೋಗಲು ಬಿಟ್ಟಿಲ್ಲ. ಅವರ ನಿಷೇಧವನ್ನು ಲೆಕ್ಕಿಸದೇ ಮುಂದುವರಿದರೆ ನಮ್ಮಿಬ್ಬರಿಗೂ ಮರಣ ಕಟ್ಟಿಟ್ಟದ್ದು."

ಅತ್ಯಂತ ಶಾಂತಭಾವದಿಂದ ನಾನು ಅವನಿಗೆ ಹೇಳಿದೆ, "ನೀನು ಹಿಂತಿರುಗಿ ಹೋಗು. ಕೈಲಾಸದ ಪಾದಪ್ರದೇಶವನ್ನು ಸ್ಪರ್ಶಮಾಡದೇ ನಾನು ಹಿಂತಿರುಗುವುದಿಲ್ಲ. ನನಗೆ ಮೃತ್ಯು ಬರುವುದಾದರೆ ಬರಲಿ! ಆದರೆ ನಾನು ಹಿಂತಿರುಗುವವನಲ್ಲ!" ಇದನ್ನು ಕೇಳಿ ಕೀಚ್‌ಖಾಂಪಾ ಸುಮ್ಮನಾದ. ಮತ್ತೆ ಅವನಿಗೆ ಹೇಳಿದೆ, "ಭೀಷಣವಾದ ಗುಡುಗಿನಂತಹ ಶಬ್ದವನ್ನು ಕೇಳಿದೆಯಲ್ಲವೇ! ಅದು ಹಿಮಖಂಡ ಬಿದ್ದ ಶಬ್ದ, ಅಷ್ಟೆ. ಕೈಲಾಸ ಶಿಖರದಿಂದ ಹೀಗೆ ಹಿಮಖಂಡಗಳು ಉರುಳಿಬೀಳುವುದು ಸಹಜ. ಅದು ನಮ್ಮ ಮೇಲೆ ಬೀಳದೆ ಸ್ವಲ್ಪ ದೂರ ಬಿದ್ದಿದೆ. ಶಿವನು ಒಂದು ಸಲ ಹೀಗೆ ರಕ್ಷಿಸಿದ್ದಾನೆ ಅಂದಮೇಲೆ ಮುಂದೆ ಕೂಡ ಖಂಡಿತ ಅವನು ನಮ್ಮ ರಕ್ಷಣೆ ಮಾಡುತ್ತಾನೆ. ಇದು ನನ್ನ ದೃಢವಿಶ್ವಾಸ. ಅವನನ್ನು ಕೂಗಿ ಕರೆ. ಅವನೇ ನಮ್ಮನ್ನು ರಕ್ಷಿಸುವ ಸ್ವಾಮಿಯೂ ಆಗಿದ್ದಾನೆ. ಒಂದು ವೇಳೆ ಅವನು ರಕ್ಷಣೆ ಮಾಡದಿದ್ದರೆ ಆಗಲೂ ಏನಂತೆ? ಆತನ ಹೆಸರಿನಲ್ಲಿ, ಇಂಥ ಪವಿತ್ರ ಸ್ಥಳದಲ್ಲಿ ಮೃತನಾದರೆ ಅದು ಪುಣ್ಯವಿಶೇಷವೇ ಸರಿ. ನೀನು ಹಿಂತಿರುಗು. ನಿನಗೆ ಕುಟುಂಬ ಇದೆ." ಕೀಚ್‌ಖಾಂಪಾ ಸುಮ್ಮನೇ ಇದ್ದ. ಕಡೆಗೆ ದೀರ್ಘನಿಟ್ಟುಸಿರು ಬಿಟ್ಟು ಹೇಳಿದ, "ನಾನು ನಿಮ್ಮನ್ನು ಬಿಟ್ಟುಹೋಗಲಾರೆ. ನಡೆಯಿರಿ. ಮುಂದೆ ಏನಾಗಬೇಕೋ ಅದು ಆಗೇ ಆಗುತ್ತದೆ, ಸಾಯುವುದೇ ಆದರೆ ನಾವಿಬ್ಬರೂ ಒಟ್ಟಿಗೇ ಸಾಯೋಣ."

ಇಬ್ಬರೂ ಜೊತೆಜೊತೆಗೆ ಮೌನವಾಗಿ, ಮೆಲ್ಲಗೆ ಮುಂದುವರಿಯುತ್ತಿದ್ದೆವು. ಶಬ್ದದ ಕಂಪನದಿಂದಲೇ ಎಲ್ಲಿ ಹಿಮದ ಬಂಡೆಗಳು ಉರುಳುತ್ತವೆಯೋ ಎಂದು ನಮ್ಮಿಬ್ಬರಿಗೆ ಮಾತನಾಡಲೂ ಭಯವಾಗುತ್ತಿತ್ತು. ಈಗ ಯಾವ ಸ್ಥಳದಲ್ಲಿ ಮುಂದೆ ಹೋಗುತ್ತಿದ್ದೆವೋ ಆ ದೂರ ಐದುನೂರು ಅಡಿಗಳಿಗಿಂತ ಹೆಚ್ಚಿರಲಿಲ್ಲ. ಎರಡೂ ಕಡೆ ಯಾವಾಗಲೂ ಹಿಮದಿಂದ ಆವೃತವಾಗಿದ್ದ ಎತ್ತರದ ಪರ್ವತಗಳು ಕೈಲಾಸದ ಪ್ರವೇಶದ್ವಾರವನ್ನು ಅಲಂಕರಿಸಿ ನಿಂತಿದ್ದವು. ಕಣ್ಣು ಮಂಜಾಗುವಷ್ಟು ಹಿಮ ಬೀಳುತ್ತಿತ್ತು. ಎಲ್ಲ ಕಡೆ ಒಂದು ಬಗೆಯ ಮಹಾಭೀತಿಯನ್ನು ಉಂಟುಮಾಡುವ ನೀರವ ಮೌನ ತಾಂಡವವಾಡುತ್ತಿತ್ತು. ಕೈಲಾಸ ಶಿಖರದ ಬಳಿ ಎಷ್ಟೆಷ್ಟು ಹತ್ತಿರ ಹೋಗತೊಡಗಿದೆನೋ ಅಷ್ಟಷ್ಟೂ ನನ್ನ ನಡಿಗೆಯ ಗತಿ ಕಡಮೆಯಾಗತೊಡಗಿತು. ಆಯಾಸದಿಂದ ಕೀಚ್‌ಖಾಂಪಾ ಇನ್ನೂ ಮುಂದೆ ನಡೆಯಲಾರದವನಾದ.

ಕೈಲಾಸದ ಪಾದಮೂಲದಿಂದ ಇನ್ನೂ ನಾಲ್ಕೈದು ನೂರು ಗಜ ದೂರದಲ್ಲಿ ಇದ್ದಾಗ, ಅತಿ ಗಂಭೀರವಾದ ಓಂಕಾರ ನಿನಾದವನ್ನು ನಾನು ಕೇಳತೊಡಗಿದೆ, ಮುಂದೆ ನಡೆಯುತ್ತಲೇ ಇದ್ದೆ. ಅಷ್ಟಷ್ಟಾಗಿ ಮುಂದುವರಿದಂತೆ, ಈ ಓಂಕಾರ ಧ್ವನಿ ಇನ್ನೂ ಸ್ಪಷ್ಟವಾಗಿ ಕೇಳಿ ಬರುತ್ತಿತ್ತು. ಎಂಥ ಗಂಭೀರ ನಾದಧ್ವನಿ! ಪ್ರಲಯದ ಮಹಾಮೌನದ ಮಧ್ಯೆ ಶಾಶ್ವತ ಧ್ವನಿಯೊಂದು ಸುಪ್ತವಾಗಿದ್ದಂತೆ, ಅದೇ ತಿರುಗಿ ಮೇಲೆದ್ದು ಬಂದಂತೆ. ಸ್ವಲ್ಪಸ್ವಲ್ಪವೇ ಇನ್ನೂ ಜೋರಾಗುತ್ತಾ ಆಗುತ್ತಾ ಪ್ರಬಲ ತರಂಗಾಕಾರದಲ್ಲಿ ಆವರಿಸಿಬಿಟ್ಟ ಈ ಧ್ವನಿಯಿಂದ ನಾಲ್ಕು ದಿಕ್ಕುಗಳೂ ತುಂಬಿಹೋದವು. ಆ ನಾದಧ್ವನಿಯಲ್ಲಿ ಮುಳುಗಿ ಹೋಗಿದ್ದೆ. ಒಳಗೆ ಹೊರಗೆ ಅದೇ ಅನಾಹತ ಶಬ್ದದ ಸ್ಪಂದನ. ಈ ಮಧುರ ಓಂಕಾರನಾದವು ವ್ಯೋಮಪಥದಲ್ಲಿ ತೇಲಿ ಬಂದಂತೆ ನನ್ನ ಮನಸ್ಸಿಗನ್ನಿಸಿತು. ಒಂದು ಅವ್ಯಕ್ತ ಆನಂದದಲ್ಲಿ ನನ್ನನ್ನೇ ಮರೆತುಬಿಟ್ಟೆ. "ಸುಖವೂ ಇಲ್ಲ, ದುಃಖವೂ ಇಲ್ಲ, ಭೂತವೂ ಇಲ್ಲ, ಭವಿಷ್ಯತ್ತೂ ಇಲ್ಲ, ಸಂಪೂರ್ಣ ವಿಶ್ವವು ಈ ಓಂಕಾರ ಧ್ವನಿಯಲ್ಲಿ ಮುಳುಗಿಹೋಗಿಬಿಟ್ಟಿದೆ" ಎಂಬ ದಿವ್ಯಭಾವ ಉಂಟಾಯಿತು.



ಈ ಸ್ಥಳದ ಎತ್ತರ ಸಮುದ್ರಮಟ್ಟದಿಂದ ಸುಮಾರು ಇಪ್ಪತ್ತು ಸಾವಿರ ಅಡಿ. ಆದರೂ ಉಸಿರಾಟದ ತೊಂದರೆಯ ಅರಿವೂ ನನಗೆ ಆಗುತ್ತಿರಲಿಲ್ಲ. ಅಷ್ಟೊಂದು ಎತ್ತರ ಮತ್ತು ಹಿಮ ಆವರಿಸಿರುವುದಕ್ಕೆ ಹೋಲಿಸಿದಾಗ ಚಳಿಯ ತೀವ್ರತೆಯೂ ಕಡಿಮೆ ಎಂದೇ ಅನ್ನಿಸಿತ್ತು. ಅದಲ್ಲದೆ, ನಾನು ಹಠಾತ್ತಾಗಿ, ಮೈಮೇಲೆ ಯಾವ ಬಟ್ಟೆ ಇತ್ತೋ, ಅಷ್ಟರಲ್ಲಿಯೇ ಬಂದುಬಿಟ್ಟಿದ್ದೆ. ಹೊರಡುವುದಕ್ಕೆ ಮುಂಚೆ, ಈ ಕಡೆ ಬರುವ ಯಾವ ಆಲೋಚನೆಯೂ ನನ್ನ ಮನಸ್ಸಿನಲ್ಲಿ ಇರಲಿಲ್ಲ. ಇಷ್ಟಾದರೂ, ಚಳಿ ತಡೆಯುವ ಬಟ್ಟೆಯಿಲ್ಲವಲ್ಲ ಎಂದು ನನಗೆ ಅನ್ನಿಸಲೇ ಇಲ್ಲ. ಅಂತರಂಗದಲ್ಲಿ ಒಂದು ಅನಿರ್ವಚನೀಯ ಆನಂದದ ಅಲೆಯು ಪ್ರವಹಿಸುತ್ತಿತ್ತು. ಈಗಲೂ, ಇಷ್ಟು ಕಾಲದ ನಂತರವೂ ಆ ಆನಂದದ ಸವಿನೆನಪು ಮನಸ್ಸಿನಲ್ಲಿ ಬಂದೊಡನೆ ಒಂದು ಬಗೆಯ ದಿವ್ಯ ಪುಲಕವಾಗುತ್ತದೆ; ಈಗಲೂ ಈ ಅನುಭವ ನನ್ನ ತನು–ಮನ–ಪ್ರಾಣಗಳನ್ನು ರೋಮಾಂಚನಗೊಳಿಸುತ್ತದೆ.

ಕೈಲಾಸದ ಪಾದಮೂಲ ಇನ್ನೂ ಒಂದು ನೂರು ಅಡಿಗಳಷ್ಟು ಮಾತ್ರ ಉಳಿದಿದೆ. ಈ ಸ್ಥಳದಲ್ಲಿ ಹಿಮದ ಮೇಲೆಯೇ ಮುಗಿಬಿದ್ದು ದೇವದೇವನ ಚರಣಕ್ಕೆ ಸಾಷ್ಟಾಂಗ ಪ್ರಣಾಮ ಮಾಡಿದೆ. ಎಷ್ಟು ಉರುಳಾಡಿದರೂ ನನಗೆ ಆಗ ತೃಪ್ತಿಯಾಗಲಿಲ್ಲ. ಭಾವೋದ್ವೇಗದಿಂದ ಹಿಮಕ್ಕೆ ಮುಖವನ್ನು ಉಜ್ಜುತ್ತಾ ಬಹಳ ಹೊತ್ತು ಅಲ್ಲಿಯೇ ಬಿದ್ದುಕೊಂಡಿದ್ದೆ. ಕಿವಿಯೊಳಗೆ ಅದೇ ಮಧುರ–ಗಂಭೀರ ಓಂಕಾರ ಧ್ವನಿ ತೇಲಿಬರುತ್ತಿತ್ತು; ಪ್ರಾಣವನ್ನು ಪಾನಮತ್ತವನ್ನಾಗಿ ಮಾಡಿತ್ತು.

ಇನ್ನೂ ಹತ್ತಿರಕ್ಕೆ ಹೋಗಿ ಕೈಲಾಸನಾಥನ ಪಾದಮೂಲವನ್ನು ಸ್ಪರ್ಶಮಾಡುವ ಉದ್ದೇಶದಿಂದ ಎದ್ದು ಮುಂದೆ ನಡೆಯತೊಡಗಿದೆ. ಆದರೆ ಕರಾರುವಕ್ಕಾಗಿ ಪಾದಮೂಲವನ್ನು ತಲುಪಲಾಗದೇ ಪೂರ್ತಿಯಾಗಿ ಹತಾಶನಾದೆ. ಅಷ್ಟೊಂದು ಹಿಮದಿಂದ ಮುಚ್ಚಿಹೋಗಿರುವ ಕೈಲಾಸದ ಪಾದಮೂಲವನ್ನು ಮುಟ್ಟುವುದು ಅಸಂಭವವೇ ಸರಿ. ನಿರಾಶೆಯಿಂದ ನನ್ನ ಪ್ರಾಣ ಅಳತೊಡಗಿತು. ಇಷ್ಟೊಂದು ದುಃಖಕಷ್ಟಗಳ ಮಧ್ಯದಲ್ಲಿ ಮನದ ಮಾಯೆಯನ್ನು ಕಡೆಗಣಿಸಿ ಇಷ್ಟು ದೂರ ಬಂದ ಮೇಲೆ ಕೂಡ, ಹತಾಶನಾಗಿ ಹಿಂದೆ ಹೋಗುವುದು! ಭಾವೋದ್ವೇಗದಿಂದ ನನಗೇ ಗೊತ್ತಿಲ್ಲದಂತೆ, ನನ್ನ ಗಲ್ಲದ ಎರಡೂ ಕಡೆಗಳಲ್ಲಿ ಕಣ್ಣೀರು ಹರಿಯತೊಡಗಿತ್ತು. ಆದರೇನು, ಬೇರೆ ದಾರಿಯೇ ಇಲ್ಲ. ಇದ್ದಕ್ಕಿದ್ದಂತೆ ಮನಸ್ಸಿಗನ್ನಿಸಿತು. ಮಂಜನ್ನು ಕೆದಕಿ ಹಾಕಿ ಪಾದಮೂಲವನ್ನು ಮುಟ್ಟುವುದು ಸಾಧ್ಯವಾಗಬಹುದೇ! ನನ್ನ ಕೈಯಲ್ಲಿದ್ದ ಕೋಲಿನ ಸಹಾಯದಿಂದ ಬರ್ಫವನ್ನು ಒಡೆದು ನಾನು ಮತ್ತು ನನ್ನ ಗೈಡ್ ಇಬ್ಬರೂ ಹಿಮವನ್ನು ತೆಗೆಯತೊಡಗಿದೆವು. ತೆಗೆಯುತ್ತಾ ತೆಗೆಯುತ್ತಾ ಸುಮಾರು ಒಂದೂವರೆ ಕೈ ಅಳತೆಯ ಕೆಳಗೆ ಕಲ್ಲು ಸಿಕ್ಕಿತು. ನಾನು ಆನಂದಪರವಶನಾದೆ. "ಕೈಲಾಸಪತಿಗೆ ಜೈ" ಎಂದು ಜೈಕಾರ ಮಾಡಿದೆ. ನನಗೆ ಈಗ ಆನಂದ ತಡೆಯಲಾಗುತ್ತಿಲ್ಲ. ಅಶ್ರುಪೂರ್ಣ ನಯನನಾಗಿ, ಭಕ್ತಿಯಿಂದ, ಪವಿತ್ರವಾದ ಕಲ್ಲನ್ನು ಸ್ಪರ್ಶಮಾಡುತ್ತಾ ಬಹಳಹೊತ್ತು ಆ ವಿರಾಟ್ ಪುರುಷನ ಚರಣದಲ್ಲಿ ಬಿದ್ದುಕೊಂಡಿದ್ದೆ. ನನಗೆ ಬೇರೆ ಯಾವ ಆಸೆಯೂ ಉಳಿದಿರಲಿಲ್ಲ. ಕೇವಲ ಆತನ ಚರಣಸ್ಪರ್ಶದ ಬಯಕೆ. ಕೈಲಾಸಪತಿಯು ಅಂತರಂಗ–ಬಹಿರಂಗಗಳನ್ನು ವ್ಯಾಪಿಸಿಕೊಂಡು ಪರಿಪೂರ್ಣನಾಗಿರುವನು. ಅಂಥ ಅತ್ಯಂತ ಪವಿತ್ರನಾದ ಕೈಲಾಸನಾಥನ ಚರಣಸ್ಪರ್ಶ ಮಾಡುವ ಸದವಕಾಶ ದೊರಕಿ ನಾನು ಕೃತಾರ್ಥನಾಗಿದ್ದೆ. ತುಂಬ ಕಷ್ಟಪಟ್ಟು ಕೋಲಿನ ಸಹಾಯದಿಂದ ಕೈಲಾಸದ ಪಾದಮೂಲದ ಕೆಲವು ಚಿಕ್ಕಚಿಕ್ಕ ಕಲ್ಲುತುಂಡುಗಳನ್ನು ಕೀಚ್‌ಖಾಂಪಾ ಮೇಲೆ ತೆಗೆದ.

ಅಷ್ಟು ಹೊತ್ತಿಗೆ ಸೂರ್ಯ ಮುಳುಗಿದ್ದ. ಅವನ ಅಂತಿಮ ಸ್ವರ್ಣರೇಖೆಯ ಪರಮಕಾಂತಿ ಕೈಲಾಸ ಶಿಖರವನ್ನು ಅತ್ಯಂತ ಸುಂದರಗೊಳಿಸಿತ್ತು. ಸಂಜೆ ಮತ್ತು ರಾತ್ರಿಯ ಆ ಸಂಧಿಕ್ಷಣದಲ್ಲಿ, ಆ ಪುಣ್ಯ ಮುಹೂರ್ತದಲ್ಲಿ, ದೇವದೇವನ ಚರಣದಲ್ಲಿ ಅಂತರಂಗದ ಭಕ್ತಿಯ ಅರ್ಘ್ಯವನ್ನು ನೀಡಿ, ನಾವಿಬ್ಬರೂ ನಿಧಾನವಾಗಿ ಹಿಂದೆ ತಿರುಗಿ ಬರಲು ಆರಂಭಿಸಿದೆವು. ಎಷ್ಟೊಂದು ದಿವ್ಯ ಆಕರ್ಷಣೆಯ ಸ್ಥಳ! ನನಗೆ ಆ ಸ್ಥಳವನ್ನು ಬಿಟ್ಟು ಬರಲು ಸ್ವಲ್ಪವೂ ಇಷ್ಟವಿರಲಿಲ್ಲ. ಮತ್ತೆ ಮತ್ತೆ ಕೈಲಾಸದ ಕಡೆ ನೋಡುತ್ತಿದ್ದೆ, ನಮಿಸುತ್ತಿದ್ದೆ. ಸ್ವಲ್ಪ ದೂರ ಬರುವಷ್ಟರಲ್ಲಿ ಅಂತರಂಗ ಮರುಗತೊಡಗಿತು. ಜೀವನದಲ್ಲಿ ಈ ಪರಮಪವಿತ್ರ ಸ್ಥಳಕ್ಕೆ ಮತ್ತೆಂದೂ ಬರಲು ಆಗದು. ವಿರಾಟ್ ಪುರುಷನು ತನ್ನ ಮಹಿಮೆಯನ್ನು ವಿಸ್ತಾರಗೊಳಿಸಿ ತನ್ನ ಧಾಮದಲ್ಲಿಯೇ ವಿರಾಜಮಾನನಾಗಿ ಇರುವನು. ಅವನಿಂದ ದೂರವಾಗುತ್ತಿರುವವನು ನಾನೇ. ನಾನೀಗ ಕೇವಲ ಸ್ಮೃತಿಯನ್ನು, ಚಿರಂತನ ಪುಣ್ಯ ಮಧುರ ನೆನಪನ್ನು, ವಿಪುಲ ಆನಂದವನ್ನು ಹಾಗೂ ಸಾಮಾನ್ಯವಾದ ಕೆಲವು ಪವಿತ್ರ ಕಲ್ಲುಗಳನ್ನು ಮಾತ್ರವೇ ನನ್ನ ಜೊತೆಗೆ ಕೊಂಡೊಯ್ಯುತ್ತಿದ್ದೇನೆ.

ಮೌನವಾಗಿ, ಬೇಗಬೇಗನೇ ನಡೆದುಹೋಗುತ್ತಿದ್ದೆ. ಎಲ್ಲ ಕಡೆ ನೀರವ ಮೌನ, ಪ್ರಶಾಂತಿ. ಕತ್ತಲೆ ದಟ್ಟವಾಗುತ್ತಾ ಬಂತು. ಅನಂತ ಆಕಾಶವು ಸ್ತಬ್ಧಕುತೂಹಲಿಗಳಾದ ಅಗಣಿತ ನಕ್ಷತ್ರ ಮಂಡಲಗಳಿಂದ ತುಂಬಿತ್ತು. ಅವುಗಳೆಲ್ಲವೂ ನಮ್ಮ ಗತಿವಿಧಿಯನ್ನು ನೋಡುತ್ತಿರುವಂತಿತ್ತು. ನಾವು ಮೊದಲು ದಾಟಿದ್ದ, ಆ ನೀರ್ಗಲ್ಲ ನದೀತೀರದ ಹತ್ತಿರ ಬಂದಾಗ ಕೀಚ್‌ಖಾಂಪಾ ಹೇಳಿದ, "ಇಂದು ನಾವು ಯಾವ ಸ್ಥಳಕ್ಕೆ ಹೋಗಿದ್ದೆವೋ ಅಲ್ಲಿಗೆ ಟಿಬೇಟಿನಲ್ಲಿರುವ ಯಾರೂ ಹೋಗುವ ಸಾಹಸ ಮಾಡಿಲ್ಲ. ನಾನು ಯಾತ್ರಿಕರನ್ನು ಕರೆದುಕೊಂಡು ಸುಮಾರು ಐವತ್ತು ಸಲ ಕೈಲಾಸಕ್ಕೆ ಬಂದಿದ್ದೇನೆ. ಆದರೆ ಯಾವ ಯಾತ್ರಿಕನೂ ಇಲ್ಲಿಯವರೆಗೆ ಕೈಲಾಸದ ಪಾದ ಮೂಲಕ್ಕೆ ಹೋಗಿಲ್ಲ. ಯಾರೋ ಹೋಗಿದ್ದಾರೆ ಎಂದು ಹೇಳುವುದನ್ನೂ ನಾನು ಕೇಳಿಲ್ಲ. ಇಂದು ನಿಮ್ಮ ಜೊತೆಯಲ್ಲಿ ನನಗೂ ಕೈಲಾಸ ಪಾದಮೂಲದ ದರ್ಶನವಾಯಿತು." ಡೇರೆಗೆ ಮರಳಿ ಬಂದಾಗ ರಾತ್ರಿ ಎಂಟೂವರೆ ಗಂಟೆಯಾಗಿತ್ತು. ಕಳವಳಗೊಂಡಿದ್ದ ನನ್ನ ಸಹಯಾತ್ರಿಗಳು, ನಾನು ಸುರಕ್ಷಿತವಾಗಿ ಹಿಂತಿರುಗಿ ಬಂದಿದ್ದನ್ನು ಕಂಡು ನಿಶ್ಚಿಂತರಾದರು; ಕೈಲಾಸ ಪಾದ ಮೂಲದ ಪವಿತ್ರ ಕಲ್ಲನ್ನು ತಮ್ಮ ತಲೆಯ ಮೇಲೆ ಇರಿಸಿಕೊಂಡು ಕೃತಾರ್ಥರಾದೆವೆಂದು ಭಾವಿಸಿದರು.

★